ಶುರುವಿಟ್ಟುಕೊಂಡರು. ತಾವು ಸೇವೆ ಸಲ್ಲಿಸಿ ಬಂದಿದ್ದ ದೂರದ ವಿಲಕ್ಷಣ ದೇಶದ ಬಗ್ಗೆ, ಅಲ್ಲಿಯ ಜನರ ವಿಚಿತ್ರ ಜೀವನ ಶೈಲಿಯ ಬಗ್ಗೆ ಮತ್ತು ತಮ್ಮ ಕಾರುಬಾರುಗಳ ಬಗ್ಗೆ.

'ಅದು ಇಪ್ಪತ್ತೊಂದು ವರ್ಷಗಳ ಹಿಂದೆ!...' ಮಿಸ್ಟರ್ ವೈಟ್ ತನ್ನ ಮಡದಿ ಮತ್ತು ಮಗನಿಗೆ ವಿವರಿಸಿದರು. 'ಮೊರಿಸ್ ನಮ್ಮ ಮಧ್ಯದಿಂದ ಎದ್ದು ಸೈನ್ಯಕ್ಕೆ ಸೇರಿಕೊಂಡಾಗ ಆಗಿನ್ನೂ ಮೀಸೆ ಚಿಗುರುತ್ತಿದ್ದ ಸಣಕಲು ಹುಡುಗ. ಈಗ ನೋಡಿ ಅವನನ್ನ?!'

'ಅವರನ್ನು ನೋಡಿದಾಗ, ಸರಿಯಾದ ದಾರಿಯನ್ನೇ ಹಿಡಿದರೆಂದು ತೋರುತ್ತದೆ.' ಮಿಸೆಸ್ ವೈಟ್ ಹೇಳಿದಳು.

'ಇದನ್ನೆಲ್ಲಾ ಕೇಳಿದಾಗ ನನಗೂ ಒಮ್ಮೆ ಇಂಡಿಯಾಕ್ಕೆ ಹೋಗಿ ಬರೋಣವೆನಿಸುತ್ತಿದೆ... ಈಗಲೇ, ಸುತ್ತಾಡಿಕೊಂಡು...' ಮಿಸ್ಟರ್ ವೈಟ್ ಹೇಳಿದ.

'ಖಂಡಿತವಾಗಿಯೂ ಬೇಡ ಮಾರಾಯ! ನೀನು ಈಗ ಎಲ್ಲಿದ್ದೀಯೋ, ಹೇಗಿದ್ದೀಯೋ ನೆಮ್ಮದಿಯಾಗಿದ್ದೀಯ.' ವಿಸ್ಕಿ ಗ್ಲಾಸನ್ನು ಕೆಳಗಿಡುತ್ತಾ ಹೇಳಿದ ಮೇಜರ್ ಮೊರಿಸ್.

'ನೀನು ವಿವರಿಸಿದ್ದ ಆ ಪುರಾತನ ದೇವಾಲಯಗಳು, ಆ ಸನ್ಯಾಸಿ ಫಕೀರರು ಮತ್ತು ಯಕ್ಷಿಣಿಕಾರರನ್ನು ನೋಡಲು ನಾನು ತುಂಬಾ ಉತ್ಸುಕನಾಗಿದ್ದೇನೆ ಮೊರಿಸ್! ನಾವು ಕಳೆದ ಭಾರಿ ಭೇಟಿಯಾಗಿದ್ದಾಗ ನೀನು ಒಂದು ಕೋತಿಯ ಅಥವಾ ಮತ್ಯಾವುದೋ ಪಂಜದ ಬಗ್ಗೆ ಹೇಳುತ್ತಿದ್ದ ನೆನಪು...'

'ಓಹ್, ಅದನ್ನಿನ್ನೂ ನೀನು ಮರೆತಿಲ್ವಾ ವೈಟ್? ಬಿಡು. ಈಗ ಅದರ ಬಗ್ಗೆ ಮಾತನಾಡುವುದು ಬೇಡ.' ಮೇಜರ್ ಮೊರಿಸ್ ಅದರ ಬಗ್ಗೆ ಮಾತನಾಡಲು ಅಷ್ಟೊಂದು ಉತ್ಸಾಹ ತೋರಲಿಲ್ಲ.

'ಕೋತಿಯ ಪಂಜ?!' ಮಿಸೆಸ್ ವೈಟ್‌ಳ ಸ್ತ್ರೀ ಸಹಜ ಕುತೂಹಲ ಜಾಗೃತವಾಯಿತು.

ಮೇಜರ್ ಸಾಹೇಬರಿಗೆ ಬೇರೆ ದಾರಿ ಇಲ್ಲದಂತಾಯಿತು. 'ಅದರಲ್ಲೇನು ವಿಶೇಷವಿಲ್ಲ ಮಿಸೆಸ್ ವೈಟ್. ಇಲ್ಲಿ ನಾವು ಏನು 'ಬ್ಲ್ಯಾಕ್ ಮ್ಯಾಜಿಕ್' ಎಂದು ಕರೆಯುತ್ತೀವೋ ಅಂತಾದೊಂದು ಸಂಗತಿ.' ಅದೊಂದು ಚಿಲ್ಲರೆ ವಿಷಯ ಎಂಬಂತಹ ದನಿಯಲ್ಲಿ ಹೇಳಿದ ಮೇಜರ್ ಮೊರಿಸ್.

ಈಗ ಮನೆಯಲ್ಲಿ ಎಲ್ಲರ ಕುತೂಹಲವೂ ಜಾಗೃತವಾಗಿತ್ತು. ಅವರು ಆಸಕ್ತಿಯಿಂದ ಮೇಜರ್ ಮೊರಿಸನ ಕಡೆಗೆ ನೋಡಿದರು. ಮೇಜರ್ ಸಾಹೇಬರು ಅಭ್ಯಾಸ ಬಲದಿಂದ ಖಾಲಿ ಲೋಟವನ್ನು ತುಟಿಗಳಿಗಾನಿಸಿ ಕೆಳಗಿಟ್ಟರು. ಇದನ್ನು ಕಂಡ ಮನೆಯ ಯಜಮಾನ ಅದನ್ನು ಮತ್ತೆ ತುಂಬಿಸಿದ.

'ನಿಜಕ್ಕೂ ಅದರಲ್ಲಿ ಏನೂ ವಿಶೇಷವಿಲ್ಲ...' ಮೊರಿಸ್ ಹೇಳತೊಡಗಿದ. 'ಒಣಗಿ ಚಪ್ಪಟೆಯಾಗಿರುವ ಕೋತಿಯ ಮುಂಗೈ ಅಥವಾ ಪಂಜ...' ಅವನು ಕೋಟಿನ ಜೇಬನ್ನು ತಡಕಾಡಿ ಅದನ್ನು ಹೊರತೆಗೆದ. ಅದನ್ನು ನೋಡುತ್ತಿದ್ದಂತೆ ಮಿಸೆಸ್ ವೈಟ್ ಮುಖ ಹುಳಿ ಮಾಡಿಕೊಂಡಳು. ಆದರೆ, ಮಗ ತೆಗೆದುಕೊಂಡು ಸೂಕ್ಷ್ಮವಾಗಿ ಪರಿಶೀಲಿಸಿ ತಂದೆಯ ಕೈಗೆ ಕೊಟ್ಟ. ಮಿಸ್ಟರ್ ವೈಟ್ ಕೂಡ ಅದನ್ನು ಪರಿಶೀಲಿಸಿ ಮೇಜಿನ ಮೇಲಿಟ್ಟು, 'ನಿಜ ಹೇಳು ಮೊರಿಸ್. ಇದರಲ್ಲೇನು ವಿಶೇಷ ಉಂಟು?' ಎಂದ.

'ಇದರೊಳಗೆ ಒಬ್ಬ ಸಾಧು ಮಾಂತ್ರಿಕ ಶಕ್ತಿ ತುಂಬಿಸಿದ್ದಾನೆ. ಇದರಿಂದಾಗಿ ಮೂವರು ಬೇರೆ ಬೇರೆ ಜನರು ಮೂರು ಮೂರು ವರಗಳನ್ನು ಪಡೆಯಬಹುದು. ಆದರೆ, ಅವನ ಮಾತನ್ನು ನಂಬುವುದಾದರೆ ನಮ್ಮ ಜೀವನ ವಿಧಿಲಿಖಿತ. ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ. ಪ್ರಯತ್ನಿಸಿದರೂ, ಅದರಿಂದ ಒಳ್ಳೆಯದಾಗದು!' ಮೇಜರ್ ಮೊರಿಸ್ ಹೇಳಿದ.

ಅವನ ಮಾತಿನಲ್ಲಿ ಕಿಂಚಿತ್ತೂ ಹಾಸ್ಯವಾಗಲಿ, ವ್ಯಂಗ್ಯವಾಗಲಿ ಇರಲಿಲ್ಲ. ತಂದೆ ಮಗ ಇಬ್ಬರೂ